**ದಿನಾಂಕ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ದಿನಾಂಕ 15.06.2026 ರ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಲಾಯಿತು.

ಮುಂದುವರೆದ **ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

15. ದಿ.22.02.2023 ರಂದು ದಾಳಿ ಪಂಚನಾಮೆ ಕಾಲದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಠಾಣೆಗೆ ನೀಡಿದ ಕ್ಯಾಮಾರದಲ್ಲಿ ಪೋಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿದ್ದು, ಈ ಬಗ್ಗೆ ನಾನು 65(ಬಿ) ರ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-17** ಎಂದು ಗುರುತಿಸಲಾಯಿತು.

16. ಘಟನೆ ಸಂಬಂಧ ಪೊಲೀಸ್ ಅಧೀಕ್ಷಕರಿಗೆ ಕಳುಹಿಸಿದ E-mail ಸಂದೇಶವನ್ನು ಕಳುಹಿಸಿದ್ದು, ಲಿಖಿತ ಮಾತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿದ್ದು, ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು **ನಿಪಿ-18 ಮತ್ತು ನಿಪಿ-19** ಎಂದು ಗುರುತಿಸಲಾಯಿತು. ದಾಳಿ ಪಲಪ್ರದವಾದ ಸಂಬಂಧ ಎಸ್.ಪಿ ರವರಿಗೆ ಮನವಿಯನ್ನು ಸಲ್ಲಿಸಿದ್ದು, ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ಮನವಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-20** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಎಸ್ ಎಂ ರವರಿಂದ</u>**

17. ನಿಪಿ-17 ರಲ್ಲಿ ದಿನಾಂಕವನ್ನು 22.02.2022 ಎಂದು ಪ್ರಿಂಟ್ ತೆಗೆದು ನಂತರ ಅದನ್ನು ಪೆನ್ಸಿಲ್ ನಲ್ಲಿ 2023 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ-17 ರಲ್ಲಿ ಫೋಟೋಗಳನ್ನು ಯಾರು ತೆಗೆದರು, ಯಾವ ಸಾಧನದಿಂದ ತೆಗೆದರು, ಸಾಧನದ description ಅನ್ನು ನೀಡಿಲ್ಲ ಎಂದರೆ ಸರಿ. ನಿಪಿ-17 ರಲ್ಲಿ ಠಾಣೆಯ ಸೀಲ್ ಹಾಕಿಲ್ಲ ಎಂದರೆ ಸರಿ. ನಿಪಿ-18 ರ E-mail ಸಂದೇಶವು E-mail format ನಲ್ಲಿ ಇಲ್ಲ ಎಂದರೆ ಸರಿ. ನಿಪಿ-19 ರ SH ಡೈರಿಯೊಂದಿಗೆ ಕೇಸ್ ಡೈರಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ನಿಪಿ-17 ರಿಂದ 20 ದಾಖಲೆಗಳನ್ನು ದೋಷರೋಪಣ ಪತ್ರದೊಂದಿಗೆ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಈ ಪ್ರಕರಣಕ್ಕೊಸ್ಕರ ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಸೃಷ್ಟಿಸಿದ ದಾಖಲೆಗಳ ಮೇಲೆ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೇ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.